# ಸಕಲವೆಲ್ಲವು ಹರಿಸೇವೆಯೆನ್ನಿ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 334.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 544.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 139.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 258.
5. Note: Lyrics given without highlights are as per Ref. 1. The wordings given in yellow highlights are as per Ref. 2 and the wordings given in green highlights are as per Ref. 3 & 4.
6. Note: Singer has followed lyrics as in Ref. 2. (yellow highlights)

ರಾಗ: ಶಂಕರಾಭರಣ ತಾಳ: ಅಟ

ಸಕಲವೆಲ್ಲವು ಹರಿಸೇವೆಯೆನ್ನಿ
ರುಕುಮಿಣಿಯರಸ ವಿಟ್ಠಲನಲ್ಲದಿಲ್ಲವೆನ್ನಿ ॥ ಪ ॥

ನುಡಿವುದೆಲ್ಲವು ನಾರಾಯಣನ ಕೀರ್ತನೆಯೆನ್ನಿ
ನಡೆವುದೆಲ್ಲವು ದೇವರ ಯಾತ್ರೆಯೆನ್ನಿ
ಕೊಡುವ ದಾನವು ಕಾಮಜನಕಗರ್ಪಿತವೆನ್ನಿ
ಎಡೆಯ ಅನ್ನವು ಹರಿಯ ಪ್ರಸಾದವೆನ್ನಿ ॥ 1 ॥

ಹೊಸ ವಸ್ತ್ರ ಉಡುವಲ್ಲಿ ಹರಿಯ ಬೆಳ್ಳುಡೆಯೆನ್ನಿ
ಕುಸುಮ ಪರಿಮಳವು ಶ್ರೀಕೃಷ್ಣಗೆನ್ನಿ
ಎಸೆವ ಆಭರಣ ಯಶೋದೆನಂದನನಗೆನ್ನಿ
ಶಶಿಮುಖಿಯರ ಕೂಟ ಸೊಬಗು ಗೋವಳಗೆನ್ನಿ ॥ 2 ॥

ಆಟಪಾಟಗಳೆಲ್ಲ ಅಂತರ್ಯಾಮಿಗೆ ಎನ್ನಿ
ಊಟ ಸತ್ಕಾರ ಕಂಜನಾಭನಿಗೆನ್ನಿ
ನೀಟಾದ ವಸ್ತುಗಳು ಕೈಟಭಾಂತಕಗೆನ್ನಿ
ಕೋಟಲೆ ಸಂಸಾರ ನಾಟಕಧರಗೆನ್ನಿ || 3 ||

ನಿದ್ರೆ ಜಾಗರವು ಸಮುದ್ರಶಯನಗೆನ್ನಿ
ಭದ್ರನಿಧಿಗಜವರದಗೆನ್ನಿ
ರೌದ್ರ ದಾರಿದ್ರ್ಯ ರಾಘವನ ಮಾಯವೆನ್ನಿ ಶ್ರೀ
ಮುದ್ರೆಗಳ ಧರಿಸಿ ಹರಿದಾಸನೆನ್ನಿ || 4 ||

ಅಣುರೇಣು ತೃಣಕಾಷ್ಠ ಪರಿಪೂರ್ಣನಹುದೆನ್ನಿ
ಎಣಿಸಲಾಗದ ಅನಂತಮಹಿಮನೆನ್ನಿ
ಸೆಣಸುವ ರಕ್ಕಸರ ಶಿರವ ಚೆಂಡಾಡುವ
ಪ್ರಣವ ಗೋಚರ ಪುರಂದರ ವಿಠಲನೆನ್ನಿ || 5 ||

**Note:** Below given lyrics in yellow highlights are as per Ref. 2 above. And the singer has followed these lyrics.

ರಾಗ: ಶಂಕರಾಭರಣ ತಾಳ: ಅಟ

ಸಕಲವೆಲ್ಲವು ಹರಿ ಸೇವೆಯೆನ್ನಿ
ರುಕುಮಿಣಿ ಪತಿಯಿಲ್ಲದನ್ಯವಿಲ್ಲವೆನ್ನಿ || ಪ ||

ನುಡಿವುದೆಲ್ಲವು ನಾರಾಯಣನ ಕೀರ್ತನೆಯೆನ್ನಿ
ನಡೆವುದೆಲ್ಲವು ದೇವರ ಯಾತ್ರೆಯೆನ್ನಿ
ಕೊಡುವ ದಾನವು ಕಾಮಜನಕಗರ್ಪಿತವೆನ್ನಿ
ಎಡೆಯ ಅನ್ನವು ಹರಿಯ ಪ್ರಸಾದವೆನ್ನಿ || 1 ||

ಹೊಸ ವಸ್ತ್ರ ಉಡುವಲ್ಲಿ ಹರಿಯ ಬೆಳ್ಳುಡೆಯೆನ್ನಿ
ಕುಸುಮ ಪರಿಮಳವು ಶ್ರೀಕೃಷ್ಣಗೆನ್ನಿ
ಎಸೆವ ಆಭರಣಗಳು ಯಶೋದೆನಂದನಗೆನ್ನಿ

ಶಶಿಮುಖಿಯರೊಡನಾಟ ಸೊಬಗ ಗೋವಳಗೆನ್ನಿ ॥ 2 ॥

ಆಟಪಾಟಗಳೆಲ್ಲ ಅಂತರ್ಯಾಮಿಗೆ ಎನ್ನಿ
ಕೂಟ ನೋಟಗಳೆಲ್ಲ ಕಂಜನಾಭಗೆ ಎನ್ನಿ
ನೀಟಾದ ವಸ್ತುಗಳು ಕೈಟಭಾಂತಕಗೆನ್ನಿ
ಕೋಟಲೆ ಸಂಸಾರ ನಾಟಕಧರಗೆಯೆನ್ನಿ ॥ 3 ॥

ನಿದ್ರೆ ಜಾಗರವು ಸಮುದ್ರಶಯನಗೆನ್ನಿ
ಭದ್ರನಿಧಿಗಜರಾಜ ವರದಗೆನ್ನಿ
ರೌದ್ರ ದಾರಿದ್ರ್ಯವು ರಾಘವನಡಿಗೆನ್ನಿ ಶ್ರೀ
ಮುದ್ರೆಗಳ ಧಾರಣವು ಹರಿಯ ದಾಸರಿಗೆನ್ನಿ ॥ 4 ॥

ಅಣು ರೇಣು ತೃಣ ಕಾಷ್ಠ ಪರಿಪೂರ್ಣನಹುದೆನ್ನಿ
ಎಣಿಸಲಾಗದನಂತ ಮಹಿಮನೆನ್ನಿ
ಸೆಣಸುವ ದೈತ್ಯರ ಗಂಡ ಪ್ರಚಂಡನೆನ್ನಿ
ಫಣಿಶಾಯಿ ಪುರಂದರ ವಿಠಲನೆ ಪರದೈವವೆನ್ನಿ ॥ 5 ॥

**Note:** Below given lyrics in green highlights are as per Ref. 3 above.

ಸಕಲವೆಲ್ಲವು ಹರಿಸೇವೆಯೆನ್ನಿ
ರುಕುಮಿಣಿಯ ರಮಣ ವಿಠಲನಲ್ಲದಿಲ್ಲವೆನ್ನಿ ॥ ಪ ॥

ನುಡಿಗಳೆಲ್ಲವು ನಾರಾಯಣನ ಕೀರ್ತನೆಯೆನ್ನಿ
ನಡೆವುದೆಲ್ಲವು ಹರಿಯಾತ್ರೆಯೆನ್ನಿ
ಕೊಡುವುದೆಲ್ಲವು ಕಾಮಜನಕಗರ್ಪಿತವೆನ್ನಿ
ಎಡೆಯ ಅನ್ನವು ಶ್ರೀ ಹರಿಯ ಪ್ರಸಾದವೆನ್ನಿ ॥ 1 ॥

ಹೊಸವಸ್ತ್ರ ಉಡುವಲ್ಲಿ ಹರಿಯ ಬೆಳ್ಳುಡೆಯೆನ್ನಿ
ಕುಸುಮ ಪರಿಮಳವು ಕಂಜನಾಭಗೆನ್ನಿ
ಎಸೆವಾಭರಣವು ಯಶೋಧೆನಂದನಗೆನ್ನಿ

ಶಶಿಮುಖಿಯರ ಕೂಟ ಸೊಬಗು ಗೋವಳಗೆನ್ನಿ    ॥ 2 ॥

ಆಟಪಾಟಗಳೆಲ್ಲ ಅಂತರ್ಯಾಮಿಗೆಯೆನ್ನಿ
ನೋಟ ಬೇಟಗಳೆಲ್ಲ ನಾಟಕಧಾರಿಗೆನ್ನಿ
ನೀಟಾದ ವಸ್ತುಗಳೆಲ್ಲ ಕೈಟಭ ಮರ್ದನಗೆನ್ನಿ
ಕೋಟಲೆ ಸಂಸಾರ ಕಪಟನಾಟಕಗೆನ್ನಿ    ॥ 3 ॥

ನಿದ್ರೆ ಜಾಗರವು ಸಮುದ್ರಶಯನಗೆನ್ನಿ
ಭದ್ರಗಜನಿಧಿ ವರದಗೆನ್ನಿ
ರೌದ್ರ ದಾರಿದ್ರ್ಯವು ರಾಘವನ ಮಾಯೆಯೆನ್ನಿ ಶ್ರೀ
ಮುದ್ರೆ ಧರಿಸಿದವ ಹರಿದಾಸನೆನ್ನಿ    ॥ 4 ॥

ಅಣುರೇಣು ತೃಣಕಾಷ್ಠ ಪರಿಪೂರ್ಣನಹುದೆನ್ನಿ
ಎಣಿಸಬಾರದನಂತ ಮಹಿಮನೆನ್ನಿ
ಸೆಣಸುವ ರಕ್ಕಸರ ಶಿರವ ಚಂಡಾಡುವ
ಪ್ರಣವಗೋಚರ ಪುರಂದರ ವಿಠಲರಾಯನೆನ್ನಿ    ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಭಕ್ತನ ಪ್ರತಿಯೊಂದು ಕರ್ಮವೂ ಹರಿಸೇವೆಯಾಗಿದೆ ಎಂಬ ಭಾವ ಈ ಗೀತೆಯಲ್ಲಿದೆ. ಬಿಂಬೋಪಾಸನೆಗೆ ಮುಖ್ಯವಾದ ಸರ್ವಸಮರ್ಪಣಭಾವ ಇಲ್ಲಿ ನಿರೂಪಿಸಲ್ಪಟ್ಟಿದೆ.

೧. **ಎಡೆಯ** – ಊಟಮಾಡುವ, ಬಡಿಸಿದ ಎಲೆ

೨. **ಬೆಳ್ಳುಡೆ** – ಬಿಳಿಯ ವಸ್ತ್ರ, ಮಡಿಬಟ್ಟೆ

**ಎಸೆವ** – ಹೊಳೆಯುವ.

**ಗೋವಳ** – ಗೋಪಾಲ.

೩. **ನೀಟಾದ** – ನೇರವಾದ; ದೊರಕುವ.

**ನಾಟಕ ಧಾರಿ** = ತನ್ನ ಲೀಲೆಗಾಗಿ ಸೃಷ್ಟಿ-ಸ್ಥಿತಿ-ಲಯಗಳೆಂಬ ನಾಟಕಗಳನ್ನು ಆಡುವವ ಮತ್ತು ಆಡಿಸುವವ, ಪರಮಾತ್ಮ

**ಕೈಟಭ ಮರ್ದನ** = (ಶ್ರೀಹರಿ) ಕೈಟಭನು ಮಧು ದೈತ್ಯನ ತಮ್ಮ. ಇವರಿಬ್ಬರೂ ಶ್ರೀಹರಿಯ ಆಲದೆಲೆಯ ಮೇಲೆ ಮಲಗಿದ ಬಾಲರೂಪದ ಕರ್ಣ ಮಲದಿಂದ ಜನಿಸಿದವರು. ಇವರು ಚತುರ್ಮುಖ ಬ್ರಹ್ಮನನ್ನು ಕಾಡತೊಡಗಿದಾಗ, ಬ್ರಹ್ಮನ ಮೊರೆಕೇಳಿ ಶ್ರೀಹರಿ ಇವರನ್ನು ಉಪಾಯದಿಂದ ಕೊಂದನು.

**ಅಂತರ್ಯಾಮಿ** = ಜೀವರಲ್ಲಿ ನೆಲಸಿದವ

**ಕಪಟ ನಾಟಕ** = ಸೃಷ್ಟಿ ಮುಂತಾದುವುಗಳ ಬಂಧನವಿಲ್ಲದೆ, ಅವುಗಳನ್ನು ನಡೆಸುವವ

೪. **ಜಾಗರ** = ಎಚ್ಚರಿಕೆ

**ಭದ್ರಗಜನಿಧಿ** = ಪಟ್ಟದಾನೆಯ ವರೆಗಿನ ಸಂಪತ್ತು

**ಮಾಯೆ** = ಇಚ್ಛೆ

೫. **ಮುದ್ರೆ** = ಧಾರ್ಮಿಕ ಚಿನ್ಹೆ

**ಪ್ರವಣಗೋಚರ** – ಓಂಕಾರ ಸಾಧನೆಗೆ ಸಿಗುವ ('ಪ್ರಣವೋ ಹಿ ಧನುಃ' ಇತ್ಯಾದಿಯಾದ ಮಂತ್ರ).

**Classification:** Keerthane
**Ankita:** purandara vittala
**Location:** NA
**Category:** Pooja Tatva,
**Sub-Category:** Krishna, deva, Rukmini, Narayana, anna, vastra, abharana, yashode, Gopala, ATa, asura, samsara, sampattu, gaja, aNu, poorna, pati, nidde, rama, om,
**Pravachana:** NA
**Explanation:** NA